ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ಕನಕಪುರ

ಸಿ.ಸಿ ನಂ:994/2011

| ಚಾಸಾ ಃ | 1 | ಪ್ರಾಸಾಃ- | 1 |
|---|---|---|---|

- - - - - - - - - - - - - - - - - - - - - - - - - - - - -

ದಿ.23.01.2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಎಪಿಪಿ ರವರಿಂದಃ-

ಮಹಜರ್ ಕಾಲಕ್ಕೆ ಪೋಲೀಸರು ನನ್ನ ಮತ್ತು ಆರೋಪಿ-1 ರವರ ಮದುವೆಯ ಲಗ್ನ ಪತ್ರಿಕೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಲಗ್ನ ಪತ್ರಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿ-1 ರವರೊಂದಿಗೆ ಜಗಳವಾದ ನಂತರ ನಾನು ನನ್ನ ತವರು ಮನೆಯಲ್ಲಿ ನನ್ನ ಮಗನೊಂದಿಗೆ ವಾಸಮಾಡುತ್ತಿದ್ದೆ ಎಂದರೆ ಸರಿ. ಈ ಬಗ್ಗೆ ಪಂಚಾಯಿತಿ ನಡೆಸಿದರೂ ಆರೋಪಿ-1 ರವರು ನನ್ನೊಂದಿಗೆ ಬಾಳಳು ಒಪ್ಪಿರುವುದಿಲ್ಲ ಎಂದರೆ ಸರಿ. ದಿ.22.06.2011ರಂದು ರಾತ್ರಿ 9:00 ಗಂಟೆ ಸಮಯದಲ್ಲಿ ಆರೋಪಿ-1 ರವರು ನನ್ನ ತಂದೆಯ ಮನೆಯ ಹತ್ತಿರ ಬಂದು ನನ್ನೊಂದಿಗೆ ಜಗಳ ಮಾಡಿ ಹಲ್ಲೆ ನಡೆಸಿರುತ್ತಾರೆಂದರೆ ಸರಿ. ಆರೋಪಿ-2 ರವರು ಆರೋಪಿ-1 ರವರಿಗೆ ಕುಮ್ಮಕ್ಕು ನೀಡಿ, ನನ್ನ ತಲೆ ಜುಟ್ಟು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದು ನೋವುಂಟು ಮಾಡಿರುತ್ತಾರೆಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ-2 ರವರಿಗೆ ಆರೋಪಿಗಳು ಬೈಯ್ದು ಹೊಡೆದಿರುತ್ತಾರೆಂದರೆ ಸರಿ.

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ